ದಿನಾಂಕ 02.04.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ. SKR ವಕೀಲರಿಂದ:**

ನಾನು ಸಂಬೇಗೌಡನದೊಡ್ಡಿ ಯಲ್ಲಿರುವ ನಮ್ಮ ಜಮೀನಿನಲ್ಲಿ ವಾಸವಾಗಿರುತ್ತೇನೆ. ಸಂಬೇಗೌಡನದೊಡ್ಡಿ ಗ್ರಾಮದಲ್ಲಿ ನೀವು ವಾಸವಾಗಿಲ್ಲ ಎಂದರೆ ಸರಿಯಲ್ಲ. ವಾದಿ ಕೆಂಪೇಗೌಡ ಮತ್ತು ಪ್ರತಿವಾದಿ ಮಹದೇವಯ್ಯ ಅಣ್ಣ ತಮ್ಮಂದಿರು ಎಂದರೆ ಸರಿ. ನನಗೆ ಸಾಕ್ಷಿ ಹೇಳಲು ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ. ಪ್ರತಿವಾದಿ ಸಾಕ್ಷಿ ಹೇಳಲು ಹೇಳಿದ ಕಾರಣ ನೀವು ಬಂದಿರುತ್ತೀರಿ ಎಂದರೆ ಸರಿ . ವಾದಿ , ಪ್ರತಿವಾದಿಯ ವಿರುದ್ಧ ಯಾವ ಪರಿಹಾರ ಕೇಳಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿದಾರರು ಜಮೀನಿನ ಒತ್ತುವರಿಯ ಸಂಬಂಧ ವಾದಿ ದಾವೆಯನ್ನು ಹಾಕಿರುತ್ತಾರೆ , ಆದರೆ ಪ್ರತಿವಾದಿ ಪ್ರತಿವಾದಿ ಒತ್ತುವರಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಸರ್ವೆ ನಂಬರ್, ಚಕ್ಕುಬಂಧಿ, ಖಾನೇಷುಮಾರಿ ನಂಬರ್ , ವಿಸ್ತೀರ್ಣ ನನಗೆ ಗೊತ್ತಿಲ್ಲ. ಎಷ್ಟು ವಿಸ್ತೀರ್ಣ ದ ಸಂಬಂಧ ದಾವೆ ಹಾಕಿರುತ್ತಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ . ವಾದ ಪತ್ರದಲ್ಲಿರುವ ವಿಷಯ ನಿಮಗೆ ಗೊತ್ತಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಗೊತ್ತಿಲ್ಲ. ದಾವಾ ಸ್ವತ್ತು ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದು ಹೇಳುತ್ತಿದ್ದೀರಿ , ಆ ಸಂಬಂಧ

ನಿಮಗೆ ಖಾನೇಷುಮಾರಿ ನಂಬರ್ ತಿಳಿದಿದೆಯಾ ಎಂದರೆ ಸಾಕ್ಷಿದಾರರು ನನಗೆ ವಿದ್ಯೆಯಿಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಪ್ರಮಾಣ ಪತ್ರದಲ್ಲಿ ವಾದಿಗೆ ದಾವಾ ಸ್ವತ್ತು ಸ್ವಯಾರ್ಜಿತ ವಾಗಿ ಬಂದಿರುತ್ತದೆ ಎಂದು ಬರೆಸಿರುವುದಿಲ್ಲ ಎಂದರೆ ಸಾಕ್ಷಿದಾರರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿದಾರರು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ನಡುವೆ ಆದಂತಹ ನ್ಯಾಯ ಪಂಚಾಯಿತಿ ಯ ವೇಳೆ ನಾನು ಇದ್ದೆ , ಯಾವ ವರ್ಷದಲ್ಲಿ ಪಂಚಾಯಿತಿ ನಡೆಯಿತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪಂಚಾಯಿತಿಯಲ್ಲಿ ಕಾರ್ಯದರ್ಶಿ ಮತ್ತು ಸಾತನೂರು PSI ಬಂದಿರುತ್ತಾರೆ. ದೂರನ್ನು ವಾದಿ ಪೋಲಿಸರಿಗೆ ನೀಡಿರುತ್ತಾರೆ. ವಾದಿಯು ಪ್ರತಿವಾದಿಯ ವಿರುದ್ಧ ದೂರು ನೀಡಿರುತ್ತಾರೆ.

ಪಂಚಾಯಿತಿಯಲ್ಲಿ ಯಾವುದೇ ಬರವಣಿಗೆಯಲ್ಲಿ ತೀರ್ಮಾನ ಮಾಡಿರಲಿಲ್ಲ. ಸದರಿ ಪಂಚಾಯಿತಿಯಲ್ಲಿ ಗ್ರಾಮಸ್ಥರು ಸಹ ಇದ್ದರು , ಅವರ ಹೆಸರು ಗೊತ್ತಿಲ್ಲ. ನೀವು ದಾಳಿಂಬ ಗ್ರಾಮದಿಂದ 9 ಕಿ ಮೀ ದೂರ ಇದ್ದೀರಿ , ನಿಮಗೆ ಹೇಗೆ ಪಂಚಾಯಿತಿಯ ವಿಷಯ ತಿಳಿಸಿರುತ್ತಾರೆ ಎಂದರೆ ಸಾಕ್ಷಿದಾರರು ನಾನೇ ಬಂದಿರುವುದಾಗಿ ನುಡಿಯುತ್ತಾರೆ. ಪಂಚಾಯಿತಿಯಲ್ಲಿ ಯಾವುದೇ ಬರವಣಿಗೆ ಆಗಿಲ್ಲ, ಬಾಯಿ ಮಾತಿನಲ್ಲಿ ಮಾತನಾಡಿರುವುದಾಗಿ ನುಡಿದಿರುತ್ತೀರಿ

, PDO ರವರಿಗೆ ವಾದಿ ನೀಡಿರುವ ಅರ್ಜಿ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ.

ವಾದಿ ನ್ಯಾಯಾಲಯಕ್ಕೆ ಯಾವ ದಾಖಲೆಗಳನ್ನು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಂಚಾಯಿತಿಯಲ್ಲಿ ಮಹಜರ್ ಅನ್ನು ಬರವಣಿಗೆ ರೂಪದಲ್ಲಿ ಮಾಡಿರುತ್ತಾರೆ. ಸದರಿ ಮಹಜರ್ ನಿಪಿ-13 ಕ್ಕೆ ನೀವು ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ನಿಪಿ-13 ಅನ್ನು ನೋಡಿ ನನಗೆ ಈಗ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಎಲ್ಲಾ ತಿಳಿದಿದ್ದರೂ ಗೊತ್ತಾಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ವಾದಿಗೆ ಸೇರಿರುವ ಸ್ವತ್ತಿನ ಬಗ್ಗೆ , ಖಾನೇಷುಮಾರಿ ನಂಬರ್, ವಿಸ್ತೀರ್ಣ ದ ಬಗ್ಗೆ ಬರೆಸಿರುತ್ತೀರಾ ಎಂದರೆ ಸಾಕ್ಷಿದಾರರು ಇಲ್ಲ, ಅಷ್ಟು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ವಾದಿಯ ತಮ್ಮ ವಾದಿಗೆ ಸೇರಿದ ಸ್ವತ್ತಿನ ಉತ್ತರ ದಿಕ್ಕಿಗೆ ಒತ್ತುವರಿ ಮಾಡಿ ಕಬಳಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಯ ಸಂಬಂಧ ದಾಖಲಾತಿಯನ್ನು ನೋಡಿ ತಿಳಿದುಕೊಂಡಿರುತ್ತೀರಾ ಎಂದರೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗೆ ಎಷ್ಟು ಆಸ್ತಿ ಸೇರಿರುತ್ತದೆ ಎನ್ನುವ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ಸರಿ . ನಿಮಗೆ ವಾದಪತ್ರದಲ್ಲಿರುವ ವಿಚಾರ ಗೊತ್ತಿರದೇ ಇದ್ದರೂ ಸಹ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ಯಾವ ಯಾವ

ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ಸರಿ .

ನಿಮಗೆ ದಾವಾ ಸ್ವತ್ತಿನ ಬಗ್ಗೆ ಹಾಗೂ ಪ್ರತಿವಾದಿ ಸ್ವತ್ತಿನ ಬಗ್ಗೆ ಯಾವ ವಿಚಾರ ಗೊತ್ತಿರದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಯ ವಿರುದ್ಧ ನೀಡಿರುವ ದೂರಿನಲ್ಲಿ ಸಹ ನೀವು ಸಾಕ್ಷಿಗೆ ಸಹಿ ಮಾಡಿರುತ್ತೀರಿ ಎಂದರೆ ಗೊತ್ತಿಲ್ಲ. ದಾಳಿಂಬ ಗ್ರಾಮದಲ್ಲಿ ದಾವಾ ಸ್ವತ್ತು ಇದ್ದು , ನೀವು 2 ವರೆ ಕಿಮೀ ದೂರದಲ್ಲಿ ವಾಸವಾಗಿರುತ್ತಿರಿ , ಹಾಗಾಗಿ ನಿಮಗೆ ದಾವಾ ಸ್ವತ್ತಿನ ಬಗ್ಗೆ ಯಾವ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಆಜುಬಾಜುದಾರರು ನೀವಾಗಿರುವುದಿಲ್ಲ ಎಂದರೆ ಸರಿ .

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ